

# ಫ್ರೆಂಚ್ ಪ್ಲೀಟ್ ಆಧುನಿಕ ನಾಗವೇಣಿಯರು!

**ಉದ್ದ ಜಡೆ ಬಿಟ್ಟು ವೈಯಾರದಿಂದ ನಡೆಯುತ್ತಿದ್ದ ಹಳೆಕಾಲದ ಮಹಿಳೆಯರು, ಇಂದಿನ ಪುಟ್ಟಮಲ್ಲಿಯರು ಗಿಡ್ಡಕೂದಲನ್ನು ಗಾಳಿಯಲ್ಲಿ ಹಾರಿಬಿಟ್ಟು ಅಡ್ಡಾಡುವುದನ್ನು ನೋಡಿ, ಈ ಜಡೆಗಳೆಲ್ಲ ನಮ್ಮ ಕಾಲಕ್ಕೆ ಮುಗಿಯಿತು ಎಂದುಕೊಂಡಿದ್ದರು. ಆದರೆ ಈ ಕಾಲದ ಹುಡುಗಿಯರು ಬಾಬ್‌ಕಟ್, ಬ್ಲಂಟ್‌ಕಟ್‌ಗಳಿಗೆ ಕಡಿವಾಣ ಹಾಕಿ ಫ್ರೆಂಚ್ ಪ್ಲೀಟ್, ಮೆಸ್ಸಿನಾಟ್‌ನತ್ತ ಚಿತ್ತ ಹರಿಸಿದ್ದಾರೆ. ಅಂದಹಾಗೆ ಫ್ರೆಂಚ್ ಪ್ಲೀಟ್ ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ.**

■ **ಉಮಾ ಅನಂತ್**

ಬಾಬ್‌ಕಟ್, ಬ್ಲಂಟ್ ಕಟ್, ಪಿಕ್ಸಿ ಕಟ್, ಯು ಕಟ್, ವಿ ಕಟ್... ಎಂದೆಲ್ಲ ಕೇಶಶೈಲಿ ಮಾಡಿಸಿಕೊಂಡು ಕೂದಲನ್ನು ಗಾಳಿಯಲ್ಲಿ ಹಾರಿಬಿಟ್ಟು, ಕ್ಷಣಕ್ಕೊಮ್ಮೆ ಅದನ್ನು ಹಿಂದಕ್ಕೆ ತಳ್ಳುತ್ತಾ ಕ್ಯಾಟ್‌ವಾಕ್ ಮಾಡುತ್ತಿದ್ದ ಯುವತಿಯರು ಇದೀಗ ಜಡೆಯತ್ತ ಒಲವು ತೋರಿಸಲಾರಂಭಿಸಿದ್ದಾರೆ. ಈ ಮೂಲಕ ಹಳೆಯ ಪರಂಪರೆ ಸಂಪ್ರದಾಯಗಳಿಗೆ ಮತ್ತೆ ಹೊಸ ಚೈತನ್ಯ, ಸ್ಪರ್ಶ ಸಿಕ್ಕಿದಂತಾಗಿದೆ.

ಫ್ರೆಂಚ್ ಪ್ಲೀಟ್ ಕೆಲಕಾಲ ಫ್ಯಾಷನ್ ಪ್ರಪಂಚದಲ್ಲಿ ಮನೆಮಾತಾಗಿ ಕ್ರಮೇಣ ಔಟ್‌ಡೇಟೆಡ್ ಎನಿಸಿಬಿಟ್ಟಿತ್ತು. ಇದೀಗ ಮತ್ತೆ ಈ ಶೈಲಿ ಜನಪ್ರಿಯತೆಯತ್ತ ಹೆಜ್ಜೆ ಹಾಕುತ್ತಿದೆ. ಇದರ ಜೊತೆಗೆ ಕಡಿಮೆ ಕೂದಲು ಹಾಗೂ ಉದ್ದ ಕೂದಲಿರುವ ಮಹಿಳೆಯರು ಮೆಸ್ಸಿನಾಟ್, ಮೆಸ್ಸಿ ಜಡೆ, ಫಿಶ್‌ಟೇಲ್ ಜಡೆ, ಟ್ವಿಸ್ಟ್ ಜಡೆ, ಬಾಕ್ಸ್ ಟ್ವಿಸ್ಟ್ ಜಡೆಯ ಕಡೆಗೂ ಚಿತ್ತ ಹರಿಸಿ ರುಷಿಮುನಿಗಳ ಜಡೆಯ ನಂಟನ್ನು ಫ್ಯಾಷನ್‌ನೊಂದಿಗೆ ತಳಕು ಹಾಕಲಾರಂಭಿಸಿದ್ದಾರೆ.

ಹಾಗೆ ನೋಡಿದರೆ ಪುರಾಣ ಕಾಲದಿಂದಲೂ ಜಡೆ ಬಿಡುವ ಪದ್ಧತಿ ನಮ್ಮಲ್ಲಿ ಇತ್ತು. ವಾಸ್ತವದಲ್ಲಿ ಗಂಡಸರು ಜಡೆ ಬಿಟ್ಟರೆ ಅವರನ್ನು 'ಜಡೆ ಸಿದ್ಧಯ್ಯ' ಎಂದೂ, ಹೆಂಗಸರು ಉದ್ದ ಕೂದಲು ಬಿಟ್ಟು ಅಚ್ಚುಕಟ್ಟಾಗಿ... 

ಅಳ್ಳಕ್ಕವಾಗಿ ಜಡೆ ಹೆಣೆದರೆ ಅವರಿಗೆ ನಾಗವೇಣಿ ಎಂದು ಕರೆಯುವುದು ರೂಢಿ. ಇದರೊಂದಿಗೆ ತೆಳು ಜಡೆ, ಕತ್ತರಿ ಜಡೆ, ಪೋನಿ ಟೇಲ್, ಮೊಗ್ಗಿನ ಜಡೆ, ಸೌತೆಕಾಯಿ ಜಡೆ ಹೀಗೆ ನೂರೆಂಟು ವಿಧದ ಜಡೆ ಹಾಕಿಕೊಳ್ಳಲಾರಂಭಿಸಿದ್ದು ಮತ್ತೆ ಜಡೆ ತನ್ನ ಪಾರುಪತ್ಯ ಮೆರೆಯುವಂತಾಗಿದೆ.

ಹಿಂದೆ ಕೂದಲು ಕಡಿಮೆ ಇದ್ದಾಗ ಜಡೆ